2016 ಕ.ತೀ.ವ 1656

## ಸನ್ಮಾನ್ಯ ನ್ಯಾಯಮೂರ್ತಿ ಶ್ರೀ ರಾಘವೇಂದ್ರ ಎಸ್. ಚೌಹಾಣ್

### ಆರ್.ಎ. ನಾಗೇಂದ್ರನಾಥ್ –ವಿರುದ್ಧ– ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ ಮತ್ತು ಇತರರು*

**ಭಾರತ ಸಂವಿಧಾನದ ಅನುಚ್ಛೇದ 226 ಹಾಗೂ 227ರಡಿಯಲ್ಲಿ ರಿಟ್ ಅರ್ಜಿ.**

**ವಿವಾದಿತ ಆದೇಶದ ನಂತರದ ಎರಡನೇ ಎದುರುದಾರರ ಮುಂದಿನ ನಡಾವಳಿಗಳನ್ನು ನಿಷೇಧಿಸುವಂತೆ ಹಾಗೂ ಮೂರನೇ ಎದುರುದಾರರು ನೀಡಿದ ವಿಚಾರಣಾ ಸೂಚನೆಯು ಕಾನೂನು ರೀತಿಯಲ್ಲಿ ಅಧಿಕಾರಯುಕ್ತವಲ್ಲವೆಂದು ಕೋರಿ ಸದರಿ ರಿಟ್ ಅರ್ಜಿ.**

**ದಾಖಲಾತಿಗಳನ್ನು ಕೂಲಂಕಶವಾಗಿ ಪರಿಶೀಲಿಸಿದ ಉಚ್ಚ ನ್ಯಾಯಾಲಯವು ಎದುರುದಾರ/ಸಂಸ್ಥೆಗೆ ಮೂರು ಬಾರಿ ತಮ್ಮ ಸಾಕ್ಷಿಯನ್ನು ಹಾಜರುಪಡಿಸಲು ಅವಕಾಶ ನೀಡಿರುವುದನ್ನು ಗಮನಿಸಿದ ಉಚ್ಚನ್ಯಾಯಾಲಯವು ಶಿಸ್ತು ಪಾಲನಾ ಪ್ರಾಧಿಕಾರದ ಆದೇಶವು ದೋಷಪೂರಿತವೆಂದು ಅಭಿಪ್ರಾಯಪಟ್ಟು ಸದರಿ ರಿಟ್ ಅರ್ಜಿಯನ್ನು ಪುರಸ್ಕರಿಸಿದೆ.**

ಅರ್ಜಿದಾರರ ಪರ: ಶ್ರೀ ಸುಮಂತ್ ಎಲ್. ಭಾರದ್ವಾಜ್ ವಕೀಲರ ಪರ ಶ್ರೀ ಸುಬ್ರಹ್ಮಣ್ಯ ಜೋಯಿಸ್, ಹಿರಿಯ ವಕೀಲರು.
ಪ್ರತ್ಯರ್ಜಿದಾರರ ಪರ: ಶ್ರೀಮತಿ ಎಚ್.ಆರ್. ರೇಣುಕ, ವಕೀಲರು.

*ರಿಟ್ ಅರ್ಜಿ ಸಂಖ್ಯೆ: 24879/2016 (ಎಸ್–ಕೆಎಸ್ಆರ್‌ಟಿಸಿ), ದಿನಾಂಕ: 30ನೇ ಆಗಸ್ಟ್, 2016.

## ಆಜ್ಞೆ

**ನ್ಯಾಯಮೂರ್ತಿ ಶ್ರೀ ರಾಘವೇಂದ್ರ ಎಸ್. ಚೌಹಾಣ್ :**

ಅರ್ಜಿದಾರರಾದ ಶ್ರೀ ಆರ್.ಎ. ನಾಗೇಂದ್ರನಾಥ್‌ರವರು, ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮದ ವ್ಯವಸ್ಥಾಪಕ ನಿರ್ದೇಶಕರು/ಶಿಸ್ತುಪ್ರಾಧಿಕಾರಿಯು ಹೊರಡಿಸಿದ ದಿನಾಂಕ 14.1.2016ರ ಆದೇಶದ ಕಾನೂನು ಸಮ್ಮತತೆಯನ್ನು ಪ್ರಶ್ನಿಸಿದ್ದು, ಇದರ ಮೂಲಕ ಶಿಸ್ತುಪ್ರಾಧಿಕಾರಿಯು ಶ್ರೀ ಕೆ.ಜಿ. ಲಕ್ಷ್ಮಿಪತಿ, ನಿವೃತ್ತ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರನ್ನು ವಿಚಾರಣಾ ಪ್ರಾಧಿಕಾರಿಯಾಗಿ ನೇಮಕ ಮಾಡಿದ್ದು, ಇವರು ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ ನೌಕರರು (ನಡತೆ ಮತ್ತು ಶಿಸ್ತು) ವಿನಿಯಮಗಳು, 1971ರ (ಸಂಕ್ಷಿಪ್ತತೆಗಾಗಿ ವಿನಿಯಮಗಳು) ವಿನಿಯಮ 23(24)ರ ಮೇರೆಗೆ ಪ್ರದತ್ತವಾದ ತನ್ನ ಅಧಿಕಾರಗಳನ್ನು ಅನ್ವಯಿಸುವ ಮೂಲಕ ವಿಚಾರಣಾ ಪ್ರಾಧಿಕಾರಿಗೆ ವಿಚಾರಣೆಯನ್ನು ಹಿಂದಕ್ಕೆ ಸಲ್ಲಿಸಿದ್ದಾರೆ. ಅರ್ಜಿದಾರನು, ದಿನಾಂಕ 28.3.2016ರ ದಿನಾಂಕ 14.1.2016ರ ಪ್ರಶ್ನಿತ ಆದೇಶದೊಂದಿಗೆ ಇಟ್ಟಿರುವ ವಿಚಾರಣಾ ನೋಟೀಸನ್ನು ಈ ನ್ಯಾಯಾಲಯವು ರದ್ದುಗೊಳಿಸಿ ತಳ್ಳಿಹಾಕಬೇಕೆಂದು ಮತ್ತೆ ಕೋರಿಕೊಂಡಿದ್ದಾರೆ.

2. ಪ್ರಕರಣದ ಮುಖ್ಯ ಸಂಗತಿಗಳು ಹೀಗಿವೆ. 1981ರಲ್ಲಿ, ಅರ್ಜಿದಾರನು ಅಸಿಸ್ಟೆಂಟ್ ಮೆಕ್ಯಾನಿಕಲ್ ಎಂಜಿನಿಯರ್ ಶ್ರೇಣಿ–II ಆಗಿ, ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮವನ್ನು ಸೇರಿದ್ದಾನೆ. (ಸಂಕ್ಷಿಪ್ತತೆಗಾಗಿ ಕ.ರಾ.ರ.ಸಾ.ನಿ.) ಅವನು ಸೇವೆಗೆ ಸೇರಿದ ದಿನಾಂಕದಿಂದ ಎರಡು ವರ್ಷಗಳ ಅವಧಿಯವರೆಗೆ ವಿಸ್ತರಿಸಲಾದಂಥ ಪರೀಕ್ಷಾರ್ಥ ಅವಧಿಯಲ್ಲಿ ಅರ್ಜಿದಾರನನ್ನು ಸೇವೆಯಿಂದ ಬಿಡುಗಡೆ ಮಾಡಲಾಯಿತು. ಸೇವೆಯಿಂದ ವಜಾಗೊಳಿಸಿದ ಆದೇಶದಿಂದ ಅರ್ಜಿದಾರನು ಬಾಧಿತನಾದುದರಿಂದ ಅವನು ಈ ನ್ಯಾಯಾಲಯದ ಮುಂದೆ ರಿಟ್ ಅರ್ಜಿಯನ್ನು ಎಂದರೆ ರಿಟ್ ಅರ್ಜಿ 973/1986ನ್ನು ಸಲ್ಲಿಸಿದ್ದಾನೆ. ದಿನಾಂಕ 3.11.1995ರ ಆದೇಶದ ಮೂಲಕ ಈ ನ್ಯಾಯಾಲಯವು ಸದರಿ ಅರ್ಜಿಯನ್ನು ಪುರಸ್ಕರಿಸಿ ಅರ್ಜಿದಾರನನ್ನು ಎಲ್ಲಾ ತತ್ಪರಿಣಾಮವಾದ ಪ್ರಯೋಜನಗಳೊಂದಿಗೆ ಸೇವೆಯಲ್ಲಿ ಪುನರ್ ನೇಮಕಗೊಳ್ಳಲು

ಸೂಚಿಸಿತು. ಎದುರುದಾರ–ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮವು ಸದರಿ ಆದೇಶದಿಂದ ಬಾಧಿತಗೊಂಡು ಇದು ರಿಟ್ ಅಪೀಲನ್ನು ಎಂದರೆ ರಿಟ್ ಅಪೀಲು ಸಂ.36/1986ನ್ನು ಸಲ್ಲಿಸಿತು. ಆದಾಗ್ಯೂ, ದಿನಾಂಕ 22.10.1997ರ ತೀರ್ಪಿನ ಮೂಲಕ ಸದರಿ ರಿಟ್ ಅಪೀಲನ್ನು ವಜಾಗೊಳಿಸಲಾಗಿತ್ತು. ತರುವಾಯದಲ್ಲಿ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮವು, ಮಾನ್ಯ ಸರ್ವೋಚ್ಚ ನ್ಯಾಯಾಲಯದ ಮುಂದೆ ಸಿವಿಲ್ ಅಪೀಲನ್ನು ಎಂದರೆ ಸಿವಿಲ್ ಅಪೀಲು ಸಂ.115/1998ನ್ನು ಸಲ್ಲಿಸಿತಾದರೂ, ದಿನಾಂಕ 24.4.2000ದ ತೀರ್ಪನ್ನು ನೀಡುವ ಮೂಲಕ ಸರ್ವೋಚ್ಚ ನ್ಯಾಯಾಲಯವು ಸದರಿ ಸಿವಿಲ್ ಅಪೀಲನ್ನು ವಜಾಗೊಳಿಸಿತ್ತು. ಮಾನ್ಯ ಏಕ ಸದಸ್ಯ ಪೀಠ ನ್ಯಾಯಾಧೀಶರ ಮುಂದೆ ತನ್ನ ಮೊಕದ್ದಮೆಯನ್ನು ಕಳೆದುಕೊಂಡು ಮಾನ್ಯ ವಿಭಾಗೀಯ ಪೀಠದ ಮುಂದೆ, ದಿನಾಂಕ 21.10.2000ದ ಆದೇಶದ ಮೂಲಕ ಸರ್ವೋಚ್ಚ ನ್ಯಾಯಾಲಯವು, ಅರ್ಜಿದಾರನನ್ನು ಅಂತಿಮವಾಗಿ ಸೇವೆಯಲ್ಲಿ ಪುನರ್ ನೇಮಕ ಮಾಡಿತ್ತು.

3. ಇದಾದ ತರುವಾಯು, ಅರ್ಜಿದಾರನು, ಎಲ್ಲಾ ತತ್ಪರಿಣಾಮದ ಪ್ರಯೋಜನಗಳೊಂದಿಗೆ ವಿಭಾಗೀಯ ಮೆಕ್ಯಾನಿಕಲ್ ಎಂಜಿನಿಯರ್ ದರ್ಜೆ–I ರ ವೃಂದದಲ್ಲಿ ಬಡ್ತಿ ಹೊಂದಿದ್ದು ದಿನಾಂಕ 11.2.1989ರಿಂದ ಪೂರ್ವಾನ್ವಯವಾಗಿ ಪರಿಣಾಮಕಾರಿಯಾಗಿತ್ತು. ಅರ್ಜಿದಾರನು ದಿನಾಂಕ 8.1.1997ರಿಂದ ಪರಿಣಾಮಕಾರಿಯಾಗುವಂತೆ ಮೆಕ್ಯಾನಿಕಲ್ ಇಂಜಿನಿಯರ್ ದರ್ಜೆ–I ಹಿರಿಯ ಹುದ್ದೆಗೆ ಬಡ್ತಿ ಹೊಂದಿದ್ದರಿಂದ, ಅವನು ಮುಖ್ಯ ಮೆಕ್ಯಾನಿಕಲ್ ಎಂಜಿನಿಯರ್‌ನ ಹುದ್ದೆಗೆ (ದರ್ಜೆ–ಆಯ್ಕೆ ದರ್ಜೆ) ಮತ್ತೆ ಬಡ್ತಿ ಹೊಂದಲು ಹಕ್ಕುಳ್ಳವನಾಗಿದ್ದನು. ಆದಾಗ್ಯೂ, ಆತನ ಕ್ಲೇಮನ್ನು ಎದುರುದಾರರು ಕಡೆಗಣಿಸಿದ್ದರು. ಆದುದರಿಂದ ಅರ್ಜಿದಾರನು ಮತ್ತೆ ರಿಟ್ ಅರ್ಜಿಯನ್ನು ಎಂದರೆ ರಿಟ್ ಅರ್ಜಿ ಸಂ.12648/2011ನ್ನು ಈ ನ್ಯಾಯಾಲಯದ ಮುಂದೆ ಮತ್ತೆ ಹೂಡಿದನು. ಈ ನ್ಯಾಯಾಲಯವು, ತನ್ನ ಆದೇಶದ ಮೂಲಕ 21.2.2004ರಿಂದ ಪೂರ್ವಾನ್ವಯವಾಗಿ ಪರಿಣಾಮಕಾರಿಯಾಗುವಂತೆ ಸದರಿ ಹುದ್ದೆಯಲ್ಲಿ ಅರ್ಜಿದಾರನನ್ನು ಬಡ್ತಿ ನೀಡಬೇಕೆಂದು ಸೂಚಿಸಿತು.

4. ಮಾನ್ಯ ಏಕ ಸದಸ್ಯ ಪೀಠ ನ್ಯಾಯಾಧೀಶರ ಆದೇಶದಿಂದ ಮತ್ತೆ ಬಾಧಿತರಾದ ಎದುರುದಾರ, ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮವು ರಿಟ್ ಅಪೀಲನ್ನು ಎಂದರೆ ರಿಟ್ ಅಪೀಲು ಸಂ.17884/2011ನ್ನು ಈ ನ್ಯಾಯಾಲಯದ ವಿಭಾಗೀಯ ಪೀಠದ ಮುಂದೆ ಸಲ್ಲಿಸಿತು. ದಿನಾಂಕ 14.3.2011ರ ತೀರ್ಪಿನಿಂದ ಸದರಿ ರಿಟ್ ಅಪೀಲನ್ನು ಮಾನ್ಯ ವಿಭಾಗೀಯ ಪೀಠವು ವಜಾಗೊಳಿಸಿತ್ತು. ಕಡೆಗೆ, 21.02.2004ರಿಂದ ಪೂರ್ವಾನ್ವಯವಾಗಿ ಅರ್ಜಿದಾರನಿಗೆ, ಬಡ್ತಿಯನ್ನು ಎದುರುದಾರ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ ನೀಡಿತ್ತು.

5. ಆದುದರಿಂದ ದಿನಾಂಕ 9.12.2013ರ ಆದೇಶದಿಂದ ಅರ್ಜಿದಾರನಿಗೆ ಹಿರಿಯ ವಿಭಾಗೀಯ ನಿಯಂತ್ರಕರು(ಆಯ್ಕೆ ದರ್ಜೆ) ಹುದ್ದೆಗೆ ಬಡ್ತಿ ನೀಡಲಾಗಿತ್ತು ಮತ್ತು ಬೆಂಗಳೂರು ಮಹಾನಗರ ಸಾರಿಗೆ ನಿಗಮ (ಬೆಂಗಳೂರು ದಕ್ಷಿಣ ವಿಭಾಗ)ದಲ್ಲಿ ನಿಯೋಜಿಸಲಾಗಿತ್ತು. ಆದಾಗ್ಯೂ, ದಿನಾಂಕ 28.2.2015ರ ಆದೇಶದ ಮೂಲಕ ಅರ್ಜಿದಾರನನ್ನು ಹುಬ್ಬಳ್ಳಿಯ ಪ್ರಾದೇಶಿಕ ತರಬೇತಿ ಸಂಸ್ಥೆಯ ಪ್ರಾಂಶುಪಾಲರಾಗಿ ಎನ್.ಡಬ್ಲ್ಯೂ.ಕೆ.ಆರ್.ಟಿ.ಸಿ. ಹುಬ್ಬಳ್ಳಿಗೆ ವರ್ಗಾವಣೆ ಮಾಡಿ, ಸ್ಥಳ ನಿಯುಕ್ತಿಗೊಳಿಸಲಾಗಿತ್ತು. ಆದರೆ, ಪ್ರಾದೇಶಿಕ ತರಬೇತಿ ಸಂಸ್ಥೆಯ ಪ್ರಾಂಶುಪಾಲರ ಹುದ್ದೆಯು, ಹಿರಿಯ ವಿಭಾಗೀಯ ನಿಯಂತ್ರಕರು(ಆಯ್ಕೆ ದರ್ಜೆ) ಹುದ್ದೆಗಿಂತ ಕಡಿಮೆಯದ್ದಾಗಿದ್ದುದರಿಂದ, ಅರ್ಜಿದಾರನು, ಕೆಳ ಹುದ್ದೆಯ ಅಂಥ ಸ್ಥಳ ನಿಯುಕ್ತಿಯಿಂದ ವಾಪಸ್ಸು ಕಳುಹಿಸಬೇಕೆಂದು ಕ್ಲೇಮು ಮಾಡಿದರು. ಆದುದರಿಂದ ಮೂರನೇ ಬಾರಿಗೆ ಅರ್ಜಿದಾರನು ಈ ನ್ಯಾಯಾಲಯದ ಮೆಟ್ಟಿಲೇರಿ ದಿನಾಂಕ 28.02.2015ರ ಆದೇಶವನ್ನು ಎಂದರೆ ರಿಟ್ ಅರ್ಜಿ ಸಂಖ್ಯೆ 8683/2015ನ್ನು ಪ್ರಶ್ನಿಸಿ ರಿಟ್ ಅರ್ಜಿಯನ್ನು ಸಲ್ಲಿಸಿದನು. ಸದರಿ ರಿಟ್ ಅರ್ಜಿಯಲ್ಲಿ, ಎದುರುದಾರರು, ತಾವು ಎದುರುದಾರರನ್ನು ಮರು–ವರ್ಗಾವಣೆ ಮಾಡುವುದಾಗಿ ಮುಚ್ಚಳಿಕೆಯನ್ನು ಬರೆದು ಕೊಟ್ಟಿದ್ದರು. ಎದುರುದಾರರು ನೀಡಿದ ಮುಚ್ಚಳಿಕೆಯನ್ನು ದಾಖಲಿಸಿಕೊಂಡು ಈ ನ್ಯಾಯಾಲಯವು ಸದರಿ ರಿಟ್ ಅರ್ಜಿಯನ್ನು ವಿಲೇ ಮಾಡಿತು.

6. ಈ ನ್ಯಾಯಾಲಯದ ಮುಂದೆ ನೀಡಲಾದ ಮುಚ್ಚಳಿಕೆ ಪತ್ರದಲ್ಲಿ ಏನೇ ಇದ್ದರೂ, ಎದುರುದಾರರು ಅರ್ಜಿದಾರನನ್ನು ಮರು ವರ್ಗಾವಣೆಗೊಳಿಸದಿದ್ದರೂ ಕೇಂದ್ರ ಕಚೇರಿಯಲ್ಲಿ ಮುಖ್ಯ ಯೋಜನೆ ಮತ್ತು ಸಂಖ್ಯಾ ಕಚೇರಿ, ದರ್ಜೆ–I ರ

ಆಯ್ಕೆ ದರ್ಜೆಯ ಹುದ್ದೆಯಲ್ಲಿ ಹುಬ್ಬಳ್ಳಿಯಲ್ಲಿ ಅವನನ್ನು ಹುದ್ದೆಗೆ ಮುಂದುವರಿಸಲಾಯಿತು. ಈ ನಡುವೆ, ಎದುರುದಾರರು, ಉಪ ಮುಖ್ಯ ಮೆಕ್ಯಾನಿಕಲ್ ಎಂಜಿನಿಯರುಗಳ ಕೆಳ ಪದವೃಂದಕ್ಕೆ ಸೇರಿದ ಐದು ಜನ ಅಧಿಕಾರಿಗಳ ಪರಿಚಯ ಪತ್ರಗಳನ್ನು ಆಹ್ವಾನಿಸುವ ಮೂಲಕ ಎರಡು ಮುಖ್ಯ ಮೆಕ್ಯಾನಿಕಲ್ ಎಂಜಿನಿಯರುಗಳ ಹುದ್ದೆಗಳನ್ನು ಭರ್ತಿ ಮಾಡಲು ನಿರ್ಧರಿಸಿದರು. ಅರ್ಜಿದಾರನು ಸದರಿ ಹುದ್ದೆಗೆ ತನ್ನ ಅಭ್ಯರ್ಥಿತನವನ್ನು ನಿರ್ಲಕ್ಷಿಸಿದ್ದಾರೆನ್ನುವ ಸಂಗತಿಯಿಂದ ಅರ್ಜಿದಾರನು ಬಾಧಿತನಾಗಿದ್ದರಿಂದ, ಅವನು, ರಿಟ್ ಅರ್ಜಿ ಸಂಖ್ಯೆ 108192/2015ನ್ನು ಸಲ್ಲಿಸುವ ಮೂಲಕ ನಾಲ್ಕನೇ ಬಾರಿಗೆ ಈ ನ್ಯಾಯಾಲಯದ ಮೆಟ್ಟಿಲೇರಿದನು. ಆದಾಗ್ಯೂ, ಈ ನ್ಯಾಯಾಲಯವು ಅರ್ಜಿದಾರನಿಗೆ ಮನವಿಯನ್ನು ಸಲ್ಲಿಸಲು ಸೂಚಿಸಿದ್ದು, ಇದನ್ನು ಎದುರುದಾರರು ಸದರಿ ಮನವಿಯನ್ನು ಸ್ವೀಕರಿಸಿದ ದಿನಾಂಕದಿಂದ ಹದಿನೈದು ದಿನಗಳೊಳಗೆ ನಿರ್ಧರಿಸಬೇಕಾಗಿತ್ತು. ಎದುರುದಾರರು ಅರ್ಜಿದಾರನು ಸಲ್ಲಿಸಿದ ಮನವಿಯನ್ನು ಹದಿನೈದು ದಿನಗಳೊಳಗೆ ನಿರ್ಧರಿಸದಿದ್ದುದರಿಂದ, ಅರ್ಜಿದಾರನು ಈ ನ್ಯಾಯಾಲಯದ ಮುಂದೆ ರಿಟ್ ಅಪೀಲನ್ನು ಎಂದರೆ ರಿಟ್ ಅಪೀಲು ಸಂ.100796/2015ನ್ನು ಸಲ್ಲಿಸಿದನು.

7. ಅರ್ಜಿದಾರನು 2012ರಲ್ಲಿ ಸೇವೆಯನ್ನು ಸಲ್ಲಿಸುತ್ತಿರುವ ಅವಧಿಯಲ್ಲಿ ಅರ್ಜಿದಾರನು, ಬಿ.ಎಂ.ಟಿ.ಸಿಯ ಕೇಂದ್ರ ಕಾರ್ಯಾಗಾರ-1 ರಲ್ಲಿ ಕೆಲಸಗಳ ವ್ಯವಸ್ಥಾಪಕನಾಗಿ ಕಾರ್ಯ ನಿರ್ವಹಿಸುತ್ತಿದ್ದನು. ಆಪಾದಿತವಾಗಿ, ಕಾರ್ಯಾಗಾರದ ಚಾರ್ಜ್‌ಮನ್ ಅರ್ಜಿದಾರರಿಗೆ, ಐದು ವಾಹನಗಳಲ್ಲಿದ್ದ ಸ್ಟೆಪ್ನಿ ಅಸೆಂಬ್ಲಿಗಳು ಕಾಣೆಯಾಗಿವೆ ಎಂದು ವರದಿ ಸಲ್ಲಿಸಿದ್ದರು. ಸದರಿ ಮಾಹಿತಿಯನ್ನು ಸ್ವೀಕರಿಸಿದ ನಂತರವೂ ಕೂಡ ಆಪಾದಿಸಲಾದಂತೆ ಅರ್ಜಿದಾರನು ಸದರಿ ಮಾಹಿತಿಯ ಬಗ್ಗೆ ಯಾವುದೇ ಕ್ರಮವನ್ನು ಕೈಗೊಂಡಿರಲಿಲ್ಲ. ಅವನು, ಸ್ಟೆಪ್ನಿಗಳ ಸುರಕ್ಷಾ ಅಭಿರಕ್ಷೆಗಾಗಿ ಅಗತ್ಯ ಕ್ರಮಗಳನ್ನು ಕೈಗೊಳ್ಳಲು ತನ್ನ ಅಧೀನ ಅಧಿಕಾರಿಗಳಿಗೆ ಸೂಚಿಸಲು ಮತ್ತು ಹೊಸ ವಾಹನಗಳ ದಾಖಲೆಗಳನ್ನು ನಿರ್ವಹಿಸಲೂ ಸಹ ಮತ್ತೆ ವಿಫಲನಾಗಿದ್ದಾನೆ. ಆಪಾದಿಸಲಾದಂತೆ ಎದುರುದಾರರು ಹದಿನೆಂಟು ಸ್ಟೆಪ್ನಿ ಅಸೆಂಬ್ಲಿಗಳ ನಷ್ಟ ಅನುಭವಿಸಿದ್ದಾರೆ. ಆದುದರಿಂದ, ಎದುರುದಾರರು, ಶ್ರೀ ಬಿ.ಎಂ. ರಾಮಚಂದ್ರಯ್ಯ ಆಗಿನ ಮುಖ್ಯ ಭದ್ರತೆ ಮತ್ತು ವಿಚಕ್ಷಣಾ ಅಧಿಕಾರಿ,

ಬೆಂಗಳೂರು ಮಹಾ ನಗರ ಸಾರಿಗೆ ಸಂಸ್ಥೆ ಇವರಿಗೆ ಹದಿನೆಂಟು ಸ್ಪೈಪ್ನಿ ಅಸೆಂಬ್ಲಿಗಳು ಕಾಣೆಯಾಗಿರುವುದಕ್ಕೆ ಸಂಬಂಧಿಸಿದಂತೆ ತನಿಖೆಯನ್ನು ನಡೆಸಲು ಸೂಚಿಸಿದ್ದಾರೆ. ದಿನಾಂಕ 28.7.2012ರಂದು ಶ್ರೀ ಬಿ.ಎಂ. ರಾಮಚಂದ್ರಯ್ಯ ತನ್ನ ವರದಿಯನ್ನು ಸಲ್ಲಿಸಿದ್ದಾರೆ. ವರದಿಯ ಆಧಾರದ ಮೇಲೆ, ದಿನಾಂಕ 31.7.2013ರಂದು ಅರ್ಜಿದಾರರಿಗೆ ಆರೋಪ ಪಟ್ಟಿಯನ್ನು ಜಾರಿಗೊಳಿಸಿದ್ದಾರೆ. ಅರ್ಜಿದಾರನು ಇದಕ್ಕೆ ಉತ್ತರ ನೀಡಿದ್ದಾರೆ. ಆದರೆ, ಶಿಸ್ತು ಪ್ರಾಧಿಕಾರಿಯು ಇವರ ಉತ್ತರದಿಂದ ತೃಪ್ತಿ ಕಾಣದ್ದರಿಂದ ದಿನಾಂಕ 27.3.2014ರ ಆದೇಶದ ಮೂಲಕ ಶಿಸ್ತು ಪ್ರಾಧಿಕಾರಿಯು, ವಿಚಾರಣಾ ಪ್ರಾಧಿಕಾರಿಯನ್ನು ನೇಮಕ ಮಾಡಿದ್ದಾರೆ. ವಿಚಾರಣಾ ಪ್ರಾಧಿಕಾರಿಯು ವಿಚಾರಣೆಯನ್ನು ನಡೆಸಿದ್ದಾರೆ.

8. ವಿಚಾರಣೆಯು ನಡೆಯುತ್ತಿರುವ ಅವಧಿಯಲ್ಲಿ, ಮುಖ್ಯ ಸಾಕ್ಷ್ಯವಾಗಿ ಆಡಳಿತ ಮಂಡಳಿ ಪರವಾಗಿ ಶ್ರೀ ಬಿ.ಎಂ. ರಾಮಚಂದ್ರಯ್ಯನವರನ್ನು ವಿಚಾರಣೆಗೊಳಪಡಿಸಲಾಯಿತು. ಇವರ ಮುಖ್ಯ ವಿಚಾರಣೆಯನ್ನು ದಾಖಲಿಸಿದ್ದರೂ, ಕೂಡ, ಪಾಟೀ ಸವಾಲಿನ ಉದ್ದೇಶಕ್ಕಾಗಿ ಸದರಿ ಸಾಕ್ಷಿದಾರರನ್ನು ಹಾಜರುಪಡಿಸಲು ಆಡಳಿತ ಮಂಡಳಿಗೆ ಮೂರು ಅವಕಾಶಗಳನ್ನು ನೀಡಿದ್ದರೂ ಕೂಡ, ಆಡಳಿತ ಮಂಡಳಿಯು ಹಾಗೆ ಮಾಡಲು ವಿಫಲವಾಗಿದೆ. ಆದುದರಿಂದ 11.11.2014ರಂದು ಸದರಿ ಸಾಕ್ಷಿದಾರರನ್ನು ಹಾಜರುಪಡಿಸಲು ನಾಲ್ಕನೇ ಅವಕಾಶವನ್ನು ನೀಡಲು ಹಾಜರುಪಡಿಸುವ ಅಧಿಕಾರಿಯು ಮನವಿಯನ್ನು ಮಾಡಿದಾಗ ವಿಚಾರಣಾ ಪ್ರಾಧಿಕಾರಿಯು ಸದರಿ ಮನವಿಯನ್ನು ನಿರಾಕರಿಸಿದ್ದಾರೆ. ವಿಚಾರಣಾ ಪ್ರಾಧಿಕಾರಿಯು ವಾದಗಳಿಗಾಗಿ ತಪ್ಪಿತಸ್ಥ ಅಧಿಕಾರಿಗಳ ವಿವರಣೆಗಾಗಿ ಮತ್ತು ವಿಚಾರಣೆಯನ್ನು ಮುಕ್ತಾಯಗೊಳಿಸುವುದಕ್ಕಾಗಿ ಮುಗಿಸಿದರು. ನಂತರದ ದಿನಾಂಕ ಎಂದರೆ 18.11.2014ರಂದು ಅರ್ಜಿದಾರನು ತನ್ನ ಲಿಖಿತ ಹೇಳಿಕೆಯನ್ನು ಸಲ್ಲಿಸಿದ್ದು, ಸಹ ತಪ್ಪಿತಸ್ಥ ಅಧಿಕಾರಿ ತನ್ನ ವಿವರಣೆಯನ್ನು ಸಲ್ಲಿಸಲು ಕಾಲಾವಕಾಶವನ್ನು ಕೋರಿದನು. ನಂತರದ ಸುನಾವಣಾ ದಿನಾಂಕದಂದು ಎಂದರೆ ದಿನಾಂಕ 16.12.2014ರಂದು ಹಾಜರುಪಡಿಸುವ ಅಧಿಕಾರಿಯೂ ಕೂಡ ತನ್ನ ನಿವೇದನೆಯನ್ನು ಸಲ್ಲಿಸಿದರು. ಆಡಳಿತ ಮಂಡಳಿಯು ಹಾಜರುಪಡಿಸಿದ ಸಾಕ್ಷ್ಯವನ್ನು ಪರಿಶೀಲಿಸಿದ ನಂತರ,

ವಿಚಾರಣಾ ಪ್ರಾಧಿಕಾರಿಯು 16.12.2014ರಂದು ತನ್ನ ವರದಿಯನ್ನು ಸಲ್ಲಿಸಿದನು. ಅವರು, ಆಡಳಿತ ಮಂಡಳಿಯು, ಅರ್ಜಿದಾರನ ವಿರುದ್ಧ ಮಾಡಲಾದ ಆರೋಪಗಳನ್ನು ರುಜುವಾತುಪಡಿಸಲು ವಿಫಲವಾಗಿತ್ತೆಂದು ಸ್ಪಷ್ಟವಾಗಿ ಅಭಿಪ್ರಾಯಪಟ್ಟಿದ್ದರು.

9. ವಿವರಣಾತ್ಮಕವಾದ ನಿರ್ಣಯದೊಂದಿಗೆ ಇದ್ದ ವಿಚಾರಣಾ ವರದಿಯನ್ನು ಸ್ವೀಕರಿಸಿದ ಎದುರುದಾರರು ಎರಡು ವರ್ಷಗಳ ದೀರ್ಘ ಅವಧಿಯವರೆಗೆ ಜಡವಾಗುಳಿದರು. ದಿನಾಂಕ 14.1.2016ರಂದು ಎದುರುದಾರರು ಪ್ರಶ್ನಿತ ಆದೇಶವನ್ನು ಹೊರಡಿಸಿ ಇದರ ಮೂಲಕ ಹೊಸ ವಿಚಾರಣಾ ಪ್ರಾಧಿಕಾರಿಯನ್ನು ನೇಮಿಸಿ, ಮುಖ್ಯ ಸಾಕ್ಷ್ಯ 1ರ ಪಾಟೀ ಸವಾಲು ಪ್ರಾರಂಭವಾಗಿದ್ದ ಕ್ಷಣದಿಂದ ವಿಚಾರಣೆಯನ್ನು ಪುನಃ ಪ್ರಾರಂಭಿಸಲು ಪ್ರಕರಣವನ್ನು ಕಳುಹಿಸುವುದು ಎಂಬುದಾಗಿದೆ. ಆದುದರಿಂದ ಪ್ರಸ್ತುತ ಅರ್ಜಿಯು ಈ ನ್ಯಾಯಾಲಯದ ಮುಂದಿದೆ.

10. ಅರ್ಜಿದಾರರ ಪರವಾಗಿ ಹಾಜರಾಗಿರುವ ಮಾನ್ಯ ಹಿರಿಯ ವಕೀಲರಾದ ಶ್ರೀ ಸುಬ್ರಹ್ಮಣ್ಯರವರು, ಈ ನ್ಯಾಯಾಲಯದ ಮುಂದೆ ಈ ಮುಂದಿನ ವಾದಗಳನ್ನು ಎತ್ತಿದ್ದಾರೆ: ಮೊದಲನೆಯದಾಗಿ, ವಿನಿಯಮಗಳ 23(14) ವಿನಿಯಮ ಪ್ರಕಾರ ವಿಚಾರಣೆಗಾಗಿ ನಿಗದಿಪಡಿಸಿದ ದಿನಾಂಕದಂದು, ಯಾವ ಮೌಖಿಕ ಮತ್ತು ದಸ್ತಾವೇಜೀಯ ಸಾಕ್ಷ್ಯವನ್ನು ಆಡಳಿತ ಮಂಡಳಿಯು ಅವಲಂಬಿಸಲು ಉದ್ದೇಶಿಸಿತ್ತೋ ಅವುಗಳನ್ನು ಆರೋಪಗಳ ಪಟ್ಟಿಗಳನ್ನು ರುಜುವಾತುಪಡಿಸುವ ಸಲುವಾಗಿ ಅಂಥ ಸಾಕ್ಷ್ಯವನ್ನು ವಿಚಾರಣಾ ಪ್ರಾಧಿಕಾರಿಯ ಮುಂದೆ ಹಾಜರುಪಡಿಸತಕ್ಕದ್ದು. ಸಾಕ್ಷಿದಾರರನ್ನು ಹಾಜರುಪಡಿಸುವ ಅಧಿಕಾರಿಯು ವಿಚಾರಣೆ ಮಾಡಬೇಕು ಮತ್ತು ಕರ್ತವ್ಯಚ್ಯುತ ಅಧಿಕಾರಿಯ ಪರವಾಗಿ ಪಾಟೀ ಸವಾಲಿಗೆ ಒಳಪಟ್ಟಿರುತ್ತದೆ. ಅಲ್ಲದೆ, ವಿನಿಯಮಗಳ 23(15)ನೇ ವಿನಿಯಮದ ಪ್ರಕಾರ, ವಿಚಾರಣಾ ಪ್ರಾಧಿಕಾರಿಯು ಕರ್ತವ್ಯಚ್ಯುತ ಪ್ರಾಧಿಕಾರಿಗೆ ನೀಡಿದ ಪಟ್ಟಿಯಲ್ಲಿ ಒಳಗೊಂಡಿರದ ಸಾಕ್ಷ್ಯವನ್ನು ಹಾಜರುಪಡಿಸಲು ಹಾಜರುಪಡಿಸುವ ಅಧಿಕಾರಿಗೆ ಅವಕಾಶ ನೀಡಬಹುದು ಅಥವಾ ವಿಚಾರಣಾ ಪ್ರಾಧಿಕಾರಿಯು ಸಾಕ್ಷಿದಾರರನ್ನು ಮರು ವಿಚಾರಣೆ ಮಾಡಲು ಹೊಸ ಸಾಕ್ಷ್ಯವನ್ನು ಕೋರಬಹುದು ಅಥವಾ ಮತ್ತೆ ತರಿಸಿಕೊಳ್ಳಬಹುದು.

ಎರಡನೆಯದಾಗಿ, ವಿನಿಯಮಗಳ 23(24)ನೇ ವಿನಿಯಮವು, ಹೆಚ್ಚಿನ ವಿಚಾರಣೆಗಾಗಿ ವಿಚಾರಣಾ ಪ್ರಾಧಿಕಾರಿಗೆ ವಿಚಾರಣೆಯನ್ನು ಹಿಂದಕ್ಕೆ ವಹಿಸಲು ಶಿಸ್ತು ಪ್ರಾಧಿಕಾರಿಗೆ ಅಧಿಕಾರ ನೀಡಿದ್ದರೂ ಸಹ ಶಿಸ್ತು ಪ್ರಾಧಿಕಾರವು, ವಿಚಾರಣೆಯನ್ನು ಕಳುಹಿಸಲು ತನ್ನ ಕಾರಣಗಳನ್ನು ದಾಖಲಿಸಬೇಕು.

ಮೂರನೆಯದಾಗಿ, ಶಿಸ್ತು ಪ್ರಾಧಿಕಾರಿಯು ದಾಖಲಿಸಿದ ಕಾರಣಗಳು ಸ್ಪಷ್ಟವಾಗಿ ಸಮರ್ಥನೀಯವಾಗಿರುವುದಿಲ್ಲ. ಪ್ರಶ್ನಿತ ಆದೇಶದ ಪ್ರಕಾರ ಆಡಳಿತ ಮಂಡಳಿಯು ಸಂಬಂಧಪಟ್ಟ ಎಲ್ಲಾ ಸಾಕ್ಷಿದಾರರನ್ನು ಹಾಜರುಪಡಿಸುವ ಅವಕಾಶವನ್ನು ನೀಡಲಾಗಿತ್ತೆಂದು ಶಿಸ್ತುಪ್ರಾಧಿಕಾರವು ಅಭಿಪ್ರಾಯಪಟ್ಟಿದೆ ಮತ್ತು ಆಡಳಿತ ಮಂಡಳಿಯು ಹೆಚ್ಚಿನ ಪಾಟೀ ಸವಾಲಿಗಾಗಿ ಮುಖ್ಯ ಸಾಕ್ಷ್ಯ 1ನ್ನು ಹಾಜರುಪಡಿಸುವ ಅವಕಾಶವನ್ನು ಮತ್ತೆ ನೀಡಬೇಕೆಂದು ಅಭಿಪ್ರಾಯಪಟ್ಟಿದೆ. ವಿಚಾರಣಾ ಪ್ರಾಧಿಕಾರಿಯು ಈ ಅವಕಾಶಗಳನ್ನು ನೀಡಿರಲಿಲ್ಲವಾದ್ದರಿಂದ, ಶಿಸ್ತು ಪ್ರಾಧಿಕಾರವು, ಹೊಸದಾಗಿ ನೇಮಕಗೊಂಡ ವಿಚಾರಣಾ ಪ್ರಾಧಿಕಾರಿಗೆ ವಿಚಾರಣೆಯನ್ನು ಹಿಂದಕ್ಕೆ ಕಳುಹಿಸಲು ಯುಕ್ತವಾಗಿದೆಯೆಂದು ಭಾವಿಸಿದೆ. ಆದಾಗ್ಯೂ, ಮಾನ್ಯ ಹಿರಿಯ ವಕೀಲರ ಪ್ರಕಾರ ಶಿಸ್ತು ಪ್ರಾಧಿಕಾರವು ಪಾಟೀ ಸವಾಲಿಗಾಗಿ ಮುಖ್ಯ ಸಾಕ್ಷ್ಯವನ್ನು ಹಾಜರುಪಡಿಸಲು ಆಡಳಿತ ಮಂಡಳಿಗೆ ಮೂರು ಬಾರಿ ಅವಕಾಶಗಳನ್ನು ಒದಗಿಸಿತ್ತು. ಆದರೆ, ಆಡಳಿತ ಮಂಡಳಿಯು ತನ್ನ ಸ್ವಂತ ಸಾಕ್ಷಿದಾರರನ್ನು ಹಾಜರುಪಡಿಸಲು ವಿಫಲವಾಗಿದೆ. ಅಲ್ಲದೆ, ಅರ್ಜಿದಾರನ ವಿರುದ್ಧ ಮಾಡಲಾದ ಆರೋಪಗಳನ್ನು ಸಾಬೀತುಪಡಿಸುವ ಉದ್ದೇಶಕ್ಕಾಗಿ ಯಾವುದೇ ಹೆಚ್ಚಿನ ಸಾಕ್ಷ್ಯವನ್ನು ಹಾಜರುಪಡಿಸಲು ಆಡಳಿತ ಮಂಡಳಿಯು ಯಾವುದೇ ಮನವಿಯನ್ನು ಮಾಡಿರಲಿಲ್ಲ. ವಾಸ್ತವವಾಗಿ, ಆಡಳಿತ ಮಂಡಳಿಯು ಲಿಖಿತ ವಿವರಣೆಯನ್ನು ಸಲ್ಲಿಸಿ, ಇದರ ಮೂಲಕ ತನ್ನ ಕಡೆಯಿಂದ ಹಾಜರುಪಡಿಸಲು ಯಾವುದೇ ಹೆಚ್ಚಿನ ಸಾಕ್ಷ್ಯ ಇರುವುದಿಲ್ಲವೆಂಬುದನ್ನು ಸ್ಪಷ್ಟವಾಗಿ ಸೂಚಿಸಿರುತ್ತದೆ. ಆದುದರಿಂದ, ಶಿಸ್ತು ಪ್ರಾಧಿಕಾರವು ನೀಡಿದ ಕಾರಣಗಳು ಕಾನೂನುಬದ್ಧವಾಗಿ ಸಮರ್ಥನೀಯವಾಗಿರುವುದಿಲ್ಲ. ಹಾಗೆಯೇ ದಿನಾಂಕ 14.1.2016ರ ಪ್ರಶ್ನಿತ ಆದೇಶವನ್ನು ಈ ನ್ಯಾಯಾಲಯವು ತಳ್ಳಿಹಾಕಲು ತಕ್ಕುದಾಗಿದೆಯೆಂದು ನಿವೇದಿಸಿದ್ದಾರೆ.

11. ಮತ್ತೊಂದು ಕಡೆ, ಎದುರುದಾರರ ಪರವಾಗಿ ಹಾಜರಾಗಿರುವ ಮಾನ್ಯ ವಕೀಲರಾದ ಎಚ್.ಆರ್. ರೇಣುಕಾರವರು, ವಿಚಾರಣೆಯನ್ನು ನಡೆಸುವ ಉದ್ದೇಶ, ಸತ್ಯವನ್ನು ದರ್ಶಿಸುವುದೇ ಆಗಿದೆಯೆಂದು ಭಾವಾವೇಶದಿಂದ ನಿವೇದಿಸಿದ್ದಾರೆ. ಆದುದರಿಂದ, ವಿಚಾರಣಾ ಅಧಿಕಾರಿಯು, ತನ್ನ ಸಾಕ್ಷಿದಾರನನ್ನು ಹಾಜರುಪಡಿಸಲು ಆಡಳಿತ ಮಂಡಳಿಗೆ ಅನುಮತಿ ನೀಡಬೇಕು ಹಾಗೆಯೇ ಅರ್ಜಿದಾರನನ್ನು ಪಾಟೀ ಸವಾಲಿಗೊಳಪಡಿಸಬೇಕು. ಹಾಗೆಯೇ, ಅರ್ಜಿದಾರನು ಸಾಕ್ಷಿದಾರನ ಸತ್ಯಾಸತ್ಯತೆಯನ್ನು ಪರೀಕ್ಷಿಸಲು ಅವಕಾಶವನ್ನು ತೆಗೆದುಕೊಳ್ಳುವುದರಿಂದ ಸಾಕ್ಷಿದಾರನ ಪಾಟೀ ಸವಾಲು ಅರ್ಜಿದಾರನ ಪರವಾಗಿರುತ್ತದೆ. ಆದರೆ ಪಾಟೀ ಸವಾಲಿನ ಸುಸಂಗತತೆಯಲ್ಲಿ ಏನೇ ಇದ್ದರೂ, ವಿಚಾರಣಾ ಪ್ರಾಧಿಕಾರಿಯು, ಹಾಜರುಪಡಿಸುವ ಅಧಿಕಾರಿಯ ಮನವಿಯನ್ನು ನಿರಾಕರಿಸಿದ್ದಾರೆ.

ಎರಡನೆಯದಾಗಿ, ಇತರ ಸಂಬಂಧಪಟ್ಟ ದಸ್ತಾವೇಜುಗಳನ್ನು ಹಾಜರುಪಡಿಸಲು ಆಡಳಿತ ಮಂಡಳಿಗೆ ಅವಕಾಶವನ್ನು ನೀಡಿರಲಿಲ್ಲ. ಆದುದರಿಂದ ಸತ್ಯವನ್ನು ಶೋಧಿಸಲು ಸಾಧ್ಯವಾಗಿಲ್ಲ. ಆದುದರಿಂದ, ಶಿಸ್ತು ಪ್ರಾಧಿಕಾರಿಯು, ವಿನಿಯಮಗಳ 23(24)ನೇ ವಿನಿಯಮಗಳ ಮೇರೆಗೆ ತನ್ನ ಅಧಿಕಾರಗಳನ್ನು ಅನ್ವಯಿಸುವುದನ್ನು ಸಮರ್ಥಿಸಿಕೊಂಡಿತ್ತು ಮತ್ತು ವಿಚಾರಣಾ ಪ್ರಾಧಿಕಾರಿಗೆ ವಿಚಾರಣೆಯನ್ನು ಹಿಂದಕ್ಕೆ ವಹಿಸಿತ್ತು. ಆದುದರಿಂದ ಪ್ರಶ್ನಿತ ಆದೇಶವನ್ನು ಮಾನ್ಯ ವಕೀಲರು ಸಮರ್ಥಿಸಿದ್ದಾರೆ.

12. ಪಕ್ಷಕಾರರ ಪರವಾಗಿ ಹಾಜರಾಗಿರುವ ಮಾನ್ಯ ವಕೀಲರ ವಾದಗಳನ್ನು ಆಲಿಸಿ, ದಾಖಲೆಯನ್ನು ಅವಲೋಕಿಸಿದ ಮೇಲೆ ಪ್ರಶ್ನಿತ ಆದೇಶವನ್ನು ಪರಿಶೀಲಿಸಲಾಗಿದೆ.

13. ವಿನಿಯಮಗಳ 23(14)ನೇ ವಿನಿಯಮ ಈ ಮುಂದಿನಂತಿದೆ:

*14) ವಿಚಾರಣೆಯನ್ನು ನಿಗದಿಪಡಿಸಿದ ದಿನಾಂಕದಂದು, ಯಾವ ಮೌಖಿಕ ಮತ್ತು ದಸ್ತಾವೇಜೀಯ ಸಾಕ್ಷ್ಯದ ಮೂಲಕ ಆರೋಪದ*

*ಪಟ್ಟಿಗಳನ್ನು ರುಜುವಾತುಪಡಿಸಲು ಉದ್ದೇಶಿಸಲಾಗಿತ್ತೋ ಆ ಸಾಕ್ಷ್ಯಗಳನ್ನು ಶಿಸ್ತು ಪ್ರಾಧಿಕಾರಿ, ತನ್ನ ಅಥವಾ ಅವರ ಪರವಾದ ಅಧಿಕಾರಿ ಹಾಜರುಪಡಿಸತಕ್ಕದ್ದು. ಸಾಕ್ಷಿದಾರರನ್ನು, ಹಾಜರುಪಡಿಸುವ ಅಧಿಕಾರಿ, ತಾನು ಅಥವಾ ತನ್ನ ಪರವಾಗಿ ಪರಿಶೀಲಿಸತಕ್ಕದ್ದು ಮತ್ತು ನಿಗಮದ ನೌಕರ ಅಥವಾ ಅವರ ಪರವಾದ ಅಧಿಕಾರಿಯನ್ನು ಪಾಟೀ ಸವಾಲು ಮಾಡಬಹುದು, ಹಾಜರುಪಡಿಸುವ ಅಧಿಕಾರಿಯು, ಯಾವ ಅಂಶಗಳ ಮೇಲೆ ಪಾಟೀ ಸವಾಲು ನಡೆಸಲಾಗಿದೆಯೋ ಆ ಯಾವುದೇ ಅಂಶಗಳ ಬಗ್ಗೆ ಸಾಕ್ಷಿದಾರರನ್ನು ಮರು ಪರಿಶೀಲಿಸಲು ಹಕ್ಕುಳ್ಳವನಾಗಿರತಕ್ಕದ್ದು. ವಿಚಾರಣಾ ಪ್ರಾಧಿಕಾರಿಯುನ್ನು ಹೊರತುಪಡಿಸಿ ಯಾವುದೇ ಹೊಸ ವಿಷಯವನ್ನು ಪಾಟೀ ಸವಾಲು ಮಾಡಲಾಗುವುದಿಲ್ಲ. ವಿಚಾರಣಾ ಪ್ರಾಧಿಕಾರಿಯು, ತಾನು ಸೂಕ್ತವೆಂದು ಭಾವಿಸಿದಲ್ಲಿ ಅಂಥ ಪ್ರಶ್ನೆಗಳನ್ನು ಸಾಕ್ಷಿದಾರರಿಗೆ ಕೇಳಬಹುದು.*

14. ವಿನಿಯಮಗಳ 23(15)ನೇ ವಿನಿಯಮವು ಈ ಮುಂದಿನಂತಿದೆ:

*15). ಶಿಸ್ತು ಪ್ರಾಧಿಕಾರಿಯು ಪರವಾಗಿ ಪ್ರಕರಣವನ್ನು ಮುಕ್ತಾಯಗೊಳಿಸುವ ಮೊದಲು ಹಾಜರಾಗುವುದು ಅಗತ್ಯವಾಗಿದ್ದರೆ, ವಿಚಾರಣಾ ಪ್ರಾಧಿಕಾರಿಯು, ತನ್ನ ವಿವೇಚನೆಯಂತೆ ಸಾಕ್ಷ್ಯವನ್ನು ಹಾಜರುಪಡಿಸಲು ಹಾಜರುಪಡಿಸುವ ಅಧಿಕಾರಿಗೆ ಅನುಮತಿಸಬಹುದು. ನಿಗಮದ ನೌಕರನಿಗೆ ನೀಡಿದ ಪಟ್ಟಿಯಲ್ಲಿ ಅದನ್ನು ಸೇರಿಸಬಾರದು ಅಥವಾ ಅದೇ ಹೊಸ ಸಾಕ್ಷ್ಯವನ್ನು ಕರೆಯಬಹುದು ಅಥವಾ ಪುನಃ ತರಿಸಿಕೊಳ್ಳಬಹುದು ಮತ್ತು ಯಾವುದೇ ಸಾಕ್ಷಿದಾರನನ್ನು ಪುನಃ ಪರೀಕ್ಷಿಸಬಹುದು ಮತ್ತು ಅಂಥ ಸಂದರ್ಭದಲ್ಲಿ ನಿಗಮದ ನೌಕರನು, ಅವನು ಹಾಜರುಪಡಿಸಬೇಕೆಂದು ಪ್ರಸ್ತಾವಿಸಲಾದ ಹೆಚ್ಚಿನ ಸಾಕ್ಷ್ಯದ ಪಟ್ಟಿಯ ಪ್ರತಿಯುನ್ನು ಒತ್ತಾಯಪಡಿಸಿದರೆ ಅದನ್ನು ಪಡೆಯಲು ಹಕ್ಕುಳ್ಳವನಾಗಿರತಕ್ಕದ್ದು ಮತ್ತು ಅಂಥ ಹೊಸ ಸಾಕ್ಷ್ಯವನ್ನು ಹಾಜರುಪಡಿಸುವ ಮೊದಲಿನ*

*ಮೂರು ಸ್ಪಷ್ಟ ದಿನಗಳು, ಅಲ್ಲದೆ, ಮುಂದೂಡಲಾದ ದಿನ ಹಾಗೂ ಯಾವ ದಿನಕ್ಕೆ ವಿಚಾರಣೆಯನ್ನು ಮುಂದೂಡಲಾಗಿದೆಯೋ ಆ ದಿನಕ್ಕೆ ವಿಚಾರಣೆಯನ್ನು ಮುಂದೂಡುವುದು ವಿಚಾರಣಾ ಪ್ರಾಧಿಕಾರಿಯು, ಅಂಥ ದಾಖಲೆಗಳನ್ನು ದಾಖಲೆಯಲ್ಲಿ ತೆಗೆದುಕೊಳ್ಳುವ ಮೊದಲು ತಪಾಸಿಸುವ ಅವಕಾಶವನ್ನು ನಿಗಮದ ನೌಕರನಿಗೆ ನೀಡತಕ್ಕದ್ದು. ವಿಚಾರಣಾ ಪ್ರಾಧಿಕಾರಿಯು, ನ್ಯಾಯದ ಹಿತರಕ್ಷಣೆ ಮಾಡಲು ಅಂಥ ಸಾಕ್ಷ್ಯವನ್ನು ಹಾಜರುಪಡಿಸುವುದು ಅಗತ್ಯವೆಂದು ಅಭಿಪ್ರಾಯಪಟ್ಟರೆ ಆ ಹೊಸ ಸಾಕ್ಷ್ಯವನ್ನು ಹಾಜರುಪಡಿಸಲು ನಿಗಮದ ನೌಕರನಿಗೆ ಅವಕಾಶ ನೀಡಬಹುದು.*

***ಟಿಪ್ಪಣಿ:*** *ಹೊಸ ಸಾಕ್ಷ್ಯಕ್ಕೆ ಅನುಮತಿ ನೀಡತಕ್ಕದ್ದಲ್ಲ ಅಥವಾ ತರಿಸತಕ್ಕದ್ದಲ್ಲ ಅಥವಾ ಸಾಕ್ಷ್ಯದಲ್ಲಿನ ಯಾವುದೇ ಅಂತರವನ್ನು ತುಂಬಲು ಯಾವುದೇ ಸಾಕ್ಷ್ಯವನ್ನು ಪುನಃ ತರಿಸತಕ್ಕದ್ದಲ್ಲ. ಮೂಲದಲ್ಲಿ ಹಾಜರುಪಡಿಸಲಾದ ಸಾಕ್ಷ್ಯದಲ್ಲಿ ಅಂತರ್ನಿಹಿತ ಲೋಪ ಅಥವಾ ನ್ಯೂನತೆಯಿದ್ದಾಗ ಮಾತ್ರ ಅಂಥ ಸಾಕ್ಷ್ಯವನ್ನು ತರಿಸಿಕೊಳ್ಳಬಹುದು.*

15. ಬರೀ ವಿನಿಯಮಗಳ ಅವಗಾಹನೆಯು, ಪ್ರಧಾನ ದಂಡಗಳನ್ನು ವಿಧಿಸುವುದಕ್ಕೆ ಸಂಬಂಧಿಸಿದಂತೆ ವಿಚಾರಣೆಯನ್ನು ನಡೆಸಲು ವಿವರವಾದ ಪ್ರಕ್ರಿಯೆಯನ್ನು ವಿವರಿಸುವಾಗ, ವಿಚಾರಣೆಯ ಪ್ರತಿಯೊಂದು ಹಂತವನ್ನು ವಿನಿಯಮಗಳ 23ನೇ ವಿನಿಯಮಗಳ ಅಡಿಯಲ್ಲಿ ನಿಯಮಿಸಲಾಗಿದೆ ಎಂಬುದನ್ನು ಸ್ಪಷ್ಟವಾಗಿ ವಿವರಿಸುತ್ತದೆ. ವಿನಿಯಮಗಳ 23(14)ನೇ ವಿನಿಯಮದ ಪ್ರಕಾರ, ಆಡಳಿತ ಮಂಡಳಿ ಕಡೆಯಿಂದ ಮೌಖಿಕ ಮತ್ತು ದಸ್ತಾವೇಜೀಯ ಸಾಕ್ಷ್ಯವನ್ನು ಹಾಜರುಪಡಿಸುವ ಅವಕಾಶವನ್ನು ಕರ್ತವ್ಯಲೋಪ ಅಧಿಕಾರಿ ವಿರುದ್ಧ ತನ್ನ ಪ್ರಕರಣವನ್ನು ರುಜುವಾತುಪಡಿಸುವ ಸಲುವಾಗಿ ಆಡಳಿತ ಮಂಡಳಿಗೆ ನೀಡಲಾಗಿದೆ. ವಿನಿಯಮಗಳ 23(15)ನೇ ವಿನಿಯಮದ ಪ್ರಕಾರ, ವಿಚಾರಣಾ ಪ್ರಾಧಿಕಾರಿಯು, ತಾನೇ ಸಾಕ್ಷಿದಾರನನ್ನು ಕರೆಯಲು ಮತ್ತು ಆಡಳಿತ ಮಂಡಳಿಯು ಹಾಜರುಪಡಿಸಿದ ಯಾವುದೇ ಸಾಕ್ಷಿದಾರನನ್ನು ಪುನಃ ಕರೆಯಲು ಮತ್ತು ಮರು ವಿಚಾರಣೆ ಮಾಡಲು ಹಾಜರುಪಡಿಸುವ ಅಧಿಕಾರಿಗೆ

ಅವಕಾಶ ನೀಡಬಹುದು. ಆದಾಗ್ಯೂ, ವಿನಿಯಮಗಳ 23(15)ನೇ ವಿನಿಯಮಕ್ಕೆ ಸೇರಿಸಲಾದ ಟಿಪ್ಪಣಿಯು, ಹೊಸ ಸಾಕ್ಷ್ಯವನ್ನು ಅನುಮತಿಸಬಾರದು ಅಥವಾ ಕರೆಯಬಾರದು ಎಂಬುದನ್ನು ಅಥವಾ ಯಾವುದೇ ಸಾಕ್ಷಿದಾರನನ್ನು ಕರೆಯಬಾರದು ಈ ಸಲುವಾಗಿ ಸಾಕ್ಷ್ಯದಲ್ಲಿರುವ ಯಾವುದೇ ಅಂತರವನ್ನು ತುಂಬಲು ಆಡಳಿತ ಮಂಡಳಿಗೆ ಅನುಮತಿಸುವುದು ಎಂಬುದನ್ನು ಸ್ಪಷ್ಟವಾಗಿ ಸೂಚಿಸುತ್ತದೆ. ಮೂಲದಲ್ಲಿ ಹಾಜರುಪಡಿಸಲಾಗಿರುವ ಸಾಕ್ಷ್ಯದಲ್ಲಿ ಅಂತರ್ನಿಹಿತ ಲೋಪ ಅಥವಾ ನ್ಯೂನತೆ ಇರುವಾಗ ಮಾತ್ರ ಅಂಥ ಸಾಕ್ಷ್ಯ ಅಥವಾ ಸಾಕ್ಷಿದಾರನನ್ನು ಕರೆಯಬಹುದು. ಈ ಟಿಪ್ಪಣಿಯು, ವಿನಿಯಮಗಳ 23(24)ನೇ ವಿನಿಯಮದ ಮೇರೆಗೆ ಶಿಸ್ತುಪ್ರಾಧಿಕಾರಕ್ಕೆ ನೀಡಿದ ಅಧಿಕಾರದ ತಿಳಿವಳಿಕೆಗೆ ಯುಕ್ತವಾದುದಾಗಿದೆ.

16. ವಿನಿಯಮಗಳ 23(24)ನೇ ವಿನಿಯಮವು ಈ ಮುಂದಿನಂತಿದೆ:

> *24). ಶಿಸ್ತು ಪ್ರಾಧಿಕಾರವು, ತಾನೇ ಅಧಿವಿಚಾರಣಾ ಪ್ರಾಧಿಕಾರಿಯಾಗಿರದಿದ್ದರೆ, ಲಿಖಿತದಲ್ಲಿ ತಾನು ದಾಖಲಿಸಬೇಕಾದ ಕಾರಣಗಳಿಗಾಗಿ, ಹೆಚ್ಚಿನ ವಿಚಾರಣೆಗಾಗಿ ಮತ್ತು ವರದಿಗಾಗಿ, ವಿಚಾರಣಾ ಪ್ರಾಧಿಕಾರಕ್ಕೆ ಪ್ರಕರಣವನ್ನು ಕಳುಹಿಸಬಹುದು ಮತ್ತು ವಿಚಾರಣಾ ಪ್ರಾಧಿಕಾರಿಯು, ಸಾಧ್ಯವಾಗಬಹುದಾದಷ್ಟರಮಟ್ಟಿಗೆ ಈ ವಿನಿಯಮದ ಉಪಬಂಧಗಳ ಪ್ರಕಾರ ಹೆಚ್ಚಿನ ವಿಚಾರಣೆಯನ್ನು ನಡೆಸಲು ಅದರ ಆಧಾರದ ಮೇಲೆ ಮುಂದುವರಿಯತಕ್ಕದ್ದು.*

17. ಪ್ರಕರಣವನ್ನು ಕಳುಹಿಸಲು ಲಿಖಿತದಲ್ಲಿ ಕಾರಣಗಳನ್ನು ದಾಖಲಿಸಿದ ನಂತರ ಶಿಸ್ತುಪ್ರಾಧಿಕಾರಿಯು ಹೆಚ್ಚಿನ ವಿಚಾರಣೆಗಾಗಿ ವಿಚಾರಣಾ ಪ್ರಾಧಿಕಾರಕ್ಕೆ ಪ್ರಕರಣವನ್ನು ಕಳುಹಿಸುವ ಅಧಿಕಾರವನ್ನು ನೀಡಿರುತ್ತದೆಂಬುದನ್ನು ಬರೀ ಉಪಬಂಧದ ಅವಗಾಹನೆಯು ಸ್ಪಷ್ಟವಾಗಿ ವಿವರಿಸುತ್ತದೆ.

18. ಎದುರುದಾರರ ಪರವಾಗಿ ಹಾಜರಾಗಿರುವ ವಕೀಲರು, ಸತ್ಯವನ್ನು ಶೋಧಿಸುವ ಸಲುವಾಗಿ ಕಳುಹಿಸುವ ಅಧಿಕಾರವನ್ನು ಚಲಾಯಿಸಬಹುದಾಗಿದೆಯೆಂದು ವಾದಿಸಿದ್ದರೂ

ಕೂಡ, ವಿನಿಯಮ 23(15)ನೇ ವಿನಿಯಮಕ್ಕೆ ಸೇರಿಸಲಾದ ಟಿಪ್ಪಣಿಯನ್ನು ಗಮನದಲ್ಲಿಟ್ಟುಕೊಂಡಿದೆಯಾದರೂ, ಸ್ಪಷ್ಟವಾಗಿ, ವಿಚಾರಣಾ ವ್ಯವಹರಣೆಗಳು ನಡೆಯುವ ಅವಧಿಯಲ್ಲಿ ಆಡಳಿತ ಮಂಡಳಿಯು ಬಿಟ್ಟ ಸಾಕ್ಷ್ಯದಲ್ಲಿನ ಯಾವುದೇ ಅಂತರವನ್ನು ತುಂಬಲು ಸದರಿ ಅಧಿಕಾರವನ್ನು ಬಳಸಿಕೊಳ್ಳಲಾಗುವುದಿಲ್ಲ. ಕಳುಹಿಸುವ ಅಧಿಕಾರವು ಅಂಥ ದೊಡ್ಡ ರೀತಿಯಲ್ಲಿ ಅಡಚಣೆಯಾಗಿದ್ದರೆ, ಆಗ ಕಳುಹಿಸುವ ಅಧಿಕಾರವನ್ನು, ವಿಚಾರಣಾ ವ್ಯವಹರಣೆಗಳಲ್ಲಿ ಅದಕ್ಕೆ ಬಿಟ್ಟ ಎಲ್ಲಾ ಅಂತರಗಳನ್ನು ತುಂಬಲು ಆಡಳಿತ ಮಂಡಳಿಗೆ ಅನುಮತಿ ನೀಡಿರುತ್ತದೆ. ಇಲಾಖಾ ವಿಚಾರಣೆಯು, ಅಧಿವಿಚಾರಣೆಗೆ ಸದೃಶವಾಗಿರುತ್ತದೆ. ಆದುದರಿಂದ, ವಿಚಾರಣಾ ವ್ಯವಹರಣೆಗಳು, ಆಡಳಿತ ಮಂಡಳಿಗೆ ಮತ್ತು ಕರ್ತವ್ಯಲೋಪ ಅಧಿಕಾರಿ ಇಬ್ಬರಿಗೂ ಸಮಂಜಸವಾಗಿರಬೇಕು. ಹಾಗೆಯೇ ವಿಚಾರಣಾ ವ್ಯವಹರಣೆಗಳ ಅವಧಿಯಲ್ಲಿ ಆಡಳಿತ ಮಂಡಳಿಯಿಂದ ಆದ ಕೊರತೆಯನ್ನು ತುಂಬುವ ಅಧಿಕಾರದಿಂದ ಆಡಳಿತ ಮಂಡಳಿಯನ್ನು ಬಲಪಡಿಸುವುದಕ್ಕೆ ಸಂಬಂಧಿಸಿದಂತೆ ರವಾನಿಸುವ ಅಧಿಕಾರವನ್ನು ಹಾಗೆ ವಿಸ್ತಾರವಾಗಿ ವಿವರಿಸಲು ಸಾಧ್ಯವಾಗುವುದಿಲ್ಲ. ಅಂಥ ವಿವರಣೆಯು ಆಡಳಿತ ಮಂಡಳಿಗೆ ಅನಿಯಂತ್ರಿತ ದೊಡ್ಡ ಪ್ರಮಾಣದ ಅಧಿಕಾರವನ್ನು ನೀಡಿರುತ್ತದೆ ಮತ್ತು ದಂಡನೆಯ ಆದೇಶವನ್ನು ಪ್ರಶ್ನಿಸುವಲ್ಲಿ ಅಧಿಕಾರರಹಿತ ಕರ್ತವ್ಯಲೋಪ ಅಧಿಕಾರಿಗೆ ಅವಕಾಶ ನೀಡುತ್ತದೆ.

19. ಈ ನ್ಯಾಯಾಲಯದ ಮುಂದಿರುವ ವಿವಾದವೇನೆಂದರೆ, ಶಿಸ್ತು ಪ್ರಾಧಿಕಾರಿಯು, ವಿಚಾರಣೆಯನ್ನು ವಿಚಾರಣಾ ಪ್ರಾಧಿಕಾರಿಗೆ ಹಿಂದಕ್ಕೆ ಕಳುಹಿಸಿರುವುದು ನ್ಯಾಯಸಮ್ಮತವಾಗಿದೆಯೇ ಅಥವಾ ಇಲ್ಲವೇ ಎಂಬುದಾಗಿದೆ.

20. ಮೇಲೆ ಸೂಚಿಸಲಾದಂತೆ, ಪಾಟೀ ಸವಾಲಿಗೆ ಮುಖ್ಯ ಸಾಕ್ಷಿದಾರನನ್ನು ಹಾಜರುಪಡಿಸುವ ಅವಕಾಶವನ್ನು ವಿಚಾರಣಾ ಅಧಿಕಾರಿಯು ನೀಡಬೇಕಾಗಿತ್ತು ಎಂದು ಶಿಸ್ತು ಪ್ರಾಧಿಕಾರವು ಅಭಿಪ್ರಾಯಪಟ್ಟಿತ್ತು. ಅಲ್ಲದೆ, ಆಡಳಿತ ಮಂಡಳಿಯು ತನ್ನ ವಾದವನ್ನು ರುಜುವಾತುಪಡಿಸುವ ಸಲುವಾಗಿ ಸಂಬಂಧಪಟ್ಟ ಇತರ ಸಾಕ್ಷಿದಾರರನ್ನು ಹಾಜರುಪಡಿಸಲು ಅವಕಾಶವನ್ನು ನೀಡಬೇಕಿತ್ತು. ಆದಾಗ್ಯೂ,

ಈ ಎರಡೂ ಅವಕಾಶಗಳನ್ನು ಆಡಳಿತ ಮಂಡಳಿಗೆ ನೀಡಿಲ್ಲದಿರುವುದರಿಂದ ವಿಚಾರಣೆಯನ್ನು ಶಿಸ್ತುಪ್ರಾಧಿಕಾರಕ್ಕೆ ಹಿಂದಕ್ಕೆ ಕಳುಹಿಸಬೇಕಾಗಿತ್ತು.

21. ಈ ನ್ಯಾಯಾಲಯವು ಆದೇಶ ಹೊರಡಿಸಿದ ನಂತರ, ಎದುರುದಾರರು, ವಿಚಾರಣಾ ಅಧಿಕಾರಿಯ ಆದೇಶ ಪಟ್ಟಿಗಳನ್ನು ಹಾಜರುಪಡಿಸಿದ್ದು, ಅದು ಈ ಪ್ರಕರಣದ ನಿರ್ಣಯಕ್ಕೆ ಸಂಬಂಧಪಟ್ಟಿರುತ್ತದೆ.

22. ಆದೇಶ ಪಟ್ಟಿಯ ಅವಗಾಹನೆ ಮಾತ್ರವೇ, ಶ್ರೀ ಬಿ.ಎಂ. ರಾಮಚಂದ್ರಯ್ಯ ನವರನ್ನು ದಿನಾಂಕ 5.9.2014ರಂದು ಮುಖ್ಯ ಸಾಕ್ಷ್ಯ–1 ಎಂದು ವಿಚಾರಣೆ ಮಾಡಲಾಗಿತ್ತು ಎಂಬುದನ್ನು ಸ್ಪಷ್ಟವಾಗಿ ವಿಷದೀಕರಿಸುತ್ತದೆ. ಅವನ ಮುಖ್ಯ ವಿಚಾರಣೆಯನ್ನು; ನಿಶಾನೆ ಪಿ.1 ಎಂದು ಗುರುತು ಮಾಡಲಾಗಿದೆ. ದಿನಾಂಕ 9.10.2014ರ ನಂತರ, ಸಾಕ್ಷಿದಾರನನ್ನಾಗಲಿ ಅಥವಾ ಹಾಜರುಪಡಿಸುವ ಅಧಿಕಾರಿಯನ್ನಾಗಲಿ ವಿಚಾರಣಾ ಅಧಿಕಾರಿಯ ಮುಂದೆ ಹಾಜರುಪಡಿಸಿರಲಿಲ್ಲ. ಆದುದರಿಂದ, ವಿಚಾರಣೆಯನ್ನು ದಿನಾಂಕ 29.10.2014ಕ್ಕೆ ನಿಗದಿಪಡಿಸಲಾಗಿತ್ತು. 29.10.2014ರಂದು ಮತ್ತೆ 1ನೇ ಮುಖ್ಯ ಸಾಕ್ಷಿದಾರರು ಗೈರುಹಾಜರಾಗಿದ್ದರು ಮತ್ತು ಮುಂದಿನ ದಿನಾಂಕದಂದು ಮುಖ್ಯ ಸಾಕ್ಷಿದಾರ–1ನ್ನು ಹಾಜರುಪಡಿಸುವುದಾಗಿ ಹಾಜರುಪಡಿಸುವ ಅಧಿಕಾರಿಯು ಭರವಸೆ ನೀಡಿದ್ದು, ಹಾಗೆಯೇ ಅವನನ್ನು ಕರ್ತವ್ಯಲೋಪ ಅಧಿಕಾರಿಯು ಪಾಟೀ ಸವಾಲನ್ನು ಮಾಡಬಹುದಾಗಿತ್ತು. ಆದಾಗ್ಯೂ, ದಿನಾಂಕ 11.11.2014ರಂದೂ ಕೂಡ ಮುಖ್ಯ ಸಾಕ್ಷಿದಾರ–1 ಗೈರುಹಾಜರಾಗಿದ್ದರು. ಈ ಸಂದರ್ಭದಲ್ಲಿ, ಹಾಜರುಪಡಿಸುವ ಅಧಿಕಾರಿಯು, ಮುಖ್ಯ ಸಾಕ್ಷಿದಾರ–1ನ್ನು ಹಾಜರುಪಡಿಸುವ ನಾಲ್ಕನೇ ಅವಕಾಶವನ್ನು ಕೋರಿದ್ದಾರೆ. ಆದಾಗ್ಯೂ, ಈಗಾಗಲೇ ಮೂರು ಅವಕಾಶಗಳನ್ನು ನೀಡಿದ್ದುದರಿಂದ, ಮುಂದಿನ ದಿನಾಂಕದಂದು ಸಾಕ್ಷಿದಾರನನ್ನು ಹಾಜರುಪಡಿಸಲು ದಿನಾಂಕ 29.10.2014ರಂದು ಹಾಜರುಪಡಿಸುವ ಅಧಿಕಾರಿಯು ಮುಚ್ಚಳಿಕೆ ನೀಡಿದ್ದರೆಂಬ ಸಂಗತಿಯನ್ನು ಪರಿಗಣಿಸಿ, ವಿಚಾರಣಾ ಅಧಿಕಾರಿಯು, ಹಾಜರುಪಡಿಸುವ ಅಧಿಕಾರಿಯ ಮನವಿಯನ್ನು ನಿರಾಕರಿಸಿದ್ದಾರೆ ಮತ್ತು ಸದರಿ ಸಾಕ್ಷಿದಾರರನ್ನು ಹಾಜರುಪಡಿಸಲು ಯಾವುದೇ ಹೆಚ್ಚಿನ ದಿನಾಂಕಗಳನ್ನು ನೀಡುವುದನ್ನು ತಿರಸ್ಕರಿಸಿದ್ದಾರೆ.

23. ಅಲ್ಲದೆ, ದಿನಾಂಕ 18.11.2014ರ ಆದೇಶ ಪಟ್ಟಿಯ ಪ್ರಕಾರ, ಅರ್ಜಿದಾರನು ತನ್ನ ಲಿಖಿತ ಹೇಳಿಕೆಯನ್ನು ಸಲ್ಲಿಸುತ್ತಿರುವಾಗ, ಇತರ ಸಹ ಕರ್ತವ್ಯಚ್ಯುತ ಅಧಿಕಾರಿಯು, ತನ್ನ ವಿವರಣೆಯನ್ನು ಸಲ್ಲಿಸಲು ಕಾಲಾವಕಾಶವನ್ನು ಕೋರಿದ್ದನು. ಆದುದರಿಂದ ವಿಚಾರಣೆಯನ್ನು ದಿನಾಂಕ16.12.2014ರ ವರೆಗೆ ಮುಂದೂಡಲಾಗಿತ್ತು. ದಿನಾಂಕ 16.12.2014ರಂದು, ಸಹ ಕರ್ತವ್ಯಚ್ಯುತ ಅಧಿಕಾರಿ ಹಾಗೂ ಹಾಜರುಪಡಿಸುವ ಅಧಿಕಾರಿಯು, ತಮ್ಮ ಲಿಖಿತ ಹೇಳಿಕೆಯನ್ನು ಸಲ್ಲಿಸಿದ್ದಾರೆ.

24. ಆದೇಶ ಪಟ್ಟಿಯ ಕೇವಲ ಅವಗಾಹನೆಯೇ, ಕರ್ತವ್ಯಚ್ಯುತ ಅಧಿಕಾರಿಗಳ ವಿರುದ್ಧ ತನ್ನ ಮೊಕದ್ದಮೆಯನ್ನು ಸಾಬೀತುಪಡಿಸುವ ಸಲುವಾಗಿ, ಸಂಬಂಧಪಟ್ಟ ಇತರ ಸಾಕ್ಷಿದಾರರನ್ನು ಹಾಜರುಪಡಿಸಲು ಆಡಳಿತ ಮಂಡಳಿಯು ಅನುಮತಿಬೇಕೆಂಬ ಮನವಿಯನ್ನು ಹಾಜರುಪಡಿಸುವ ಅಧಿಕಾರಿಯು ಯಾವುದೇ ಸಮಯದಲ್ಲಿಯೂ ಕೋರಿರಲಿಲ್ಲವೆಂಬುದನ್ನು ಮತ್ತೆ ವಿಶದಪಡಿಸುತ್ತದೆ.

25. ಆದುದರಿಂದ, ಕರ್ತವ್ಯಚ್ಯುತ ಅಧಿಕಾರಿಯು ಮುಖ್ಯ ಸಾಕ್ಷಿದಾರ–1ನ್ನು ಪಾಟೀ ಸವಾಲು ಮಾಡಲು ಅವಕಾಶವನ್ನು ನೀಡಬೇಕಾಗಿತ್ತೆಂದು ಮತ್ತು ಆಡಳಿತ ಮಂಡಳಿಯು ಇತರ ಸಂಬಂಧಪಟ್ಟ ಸಾಕ್ಷಿದಾರರನ್ನು ಹಾಜರುಪಡಿಸುವ ಅವಕಾಶವನ್ನು ನೀಡಬೇಕೆಂದು ಶಿಸ್ತು ಪ್ರಾಧಿಕಾರಿಯು ನೀಡಿದ ಕಾರಣಗಳನ್ನು ವಿಚಾರಣಾ ಅಧಿಕಾರಿಯ ಆದೇಶಪಟ್ಟಿಯೇ ಹುಸಿಗೊಳಿಸಿದೆ. ಮೂರು ಬಾರಿ ಆಡಳಿತ ಮಂಡಳಿಗೆ ತನ್ನ ಸಾಕ್ಷಿದಾರನನ್ನು ಹಾಜರುಪಡಿಸುವ ಅವಕಾಶವನ್ನು ನೀಡಲಾಗಿತ್ತು ಹಾಗೆಯೇ ಅವನನ್ನು ಪಾಟೀ ಸವಾಲಿಗೆ ಒಳಪಡಿಸಬಹುದಿತ್ತು; ಆಡಳಿತ ಮಂಡಳಿಯು ಮೂರು ಬಾರಿ ಹಾಗೆ ಮಾಡಲು ವಿಲಕ್ಷಣವಾಗಿ ವಿಫಲವಾಗಿದೆ. ಆದುದರಿಂದ, ವಿಚಾರಣಾ ಪ್ರಾಧಿಕಾರವು ಸದರಿ ಸಾಕ್ಷಿದಾರನನ್ನು ಹಾಜರುಪಡಿಸಲು ಆಡಳಿತ ಮಂಡಳಿಗೆ ಹೆಚ್ಚಿನ ಅವಕಾಶವನ್ನು ನೀಡಬೇಕಾಗಿತ್ತೆಂಬುದನ್ನು ಕ್ಲೇಮು ಪಡಿಸುವಲ್ಲಿ ಶಿಸ್ತುಪ್ರಾಧಿಕಾರಿಯು ಸಮರ್ಥಿಸಿಲ್ಲ. ಕಡೆಗೂ, ಆಡಳಿತ ಮಂಡಳಿಯು ತನ್ನ ಸಾಕ್ಷಿದಾರರನ್ನು ಹಾಜರುಪಡಿಸಲು ಕಡೆವರೆಗೂ ವಿಚಾರಣಾ ಅಧಿಕಾರಿಯು ನಿರೀಕ್ಷಿಸಲು ಸಾಧ್ಯವಾಗುವುದಿಲ್ಲ. ಅಲ್ಲದೆ, ಸಂಬಂಧಪಟ್ಟ ಇತರ ಸಾಕ್ಷಿದಾರರನ್ನು ಹಾಜರುಪಡಿಸಲು ವಿಚಾರಣಾ ಅಧಿಕಾರಿಯು ಮನವಿಯನ್ನು ಮಾಡಿಲ್ಲದಿರುವುದರಿಂದ, ವಿಚಾರಣೆಯನ್ನು

ಮುಕ್ತಾಯಗೊಳಿಸುವ ಸಂಬಂಧ ವಿಚಾರಣಾ ಅಧಿಕಾರಿಯನ್ನು ಆರೋಪಿಸಲಾಗುವುದಿಲ್ಲ. ಆದುದರಿಂದ, ಸಂಬಂಧಪಟ್ಟ ಇತರ ಸಾಕ್ಷಿದಾರರನ್ನು ಹಾಜರುಪಡಿಸಲು ಅವಕಾಶವನ್ನು ನೀಡಲಾಗಿತ್ತು ಎಂದು ಶಿಸ್ತುಪ್ರಾಧಿಕಾರವು ನೀಡಿದ ಎರಡನೇ ಕಾರಣವು ಆದೇಶ ಪಟ್ಟಿಯು ಸಮರ್ಥಿಸಲಾಗದ ಕಾರಣವಾಗಿದೆ. ಆಡಳಿತ ಮಂಡಳಿಯು ತನ್ನ ವಾದವನ್ನು ಮತ್ತೆ ಸಾಬೀತುಪಡಿಸುವ ಸಲುವಾಗಿ ಸಂಬಂಧಪಟ್ಟ ಯಾವುದೇ ಸಾಕ್ಷಿದಾರರನ್ನು ಹಾಜರುಪಡಿಸದಿದ್ದರೆ ವಿಚಾರಣೆಯನ್ನು ಮುಕ್ತಾಯಗೊಳಿಸುವ ಸಂಬಂಧ ಮತ್ತೆ ವಿಚಾರಣಾ ಅಧಿಕಾರಿಯನ್ನು ಆರೋಪಿಸಲಾಗುವುದಿಲ್ಲ. ಆದುದರಿಂದ ಶಿಸ್ತು ಪ್ರಾಧಿಕಾರವು ನೀಡಿದ ಎರಡೂ ಕಾರಣಗಳಿಗೆ ಯಾವುದೇ ಸಮರ್ಥನೆಯಿರುವುದಿಲ್ಲ. ಅರ್ಜಿದಾರನ ವಿರುದ್ಧ ಇಲಾಖಾ ವಿಚಾರಣೆಯನ್ನು ಮತ್ತೆ ತೆರೆಯಲು ಈ ಕಾರಣಗಳು ನೆಪಮಾತ್ರವಾಗಿ ಕಂಡು ಬರುತ್ತವೆ. ಅದೂ ಎರಡು ವರ್ಷಗಳು ಕಳೆದ ತರುವಾಯವೂ ನೆಪವಾಗಿರುವುದು ಕಂಡು ಬರುತ್ತದೆ. ಎರಡು ವರ್ಷಗಳ ಅವಧಿಯ ಶಿಸ್ತು ಪ್ರಾಧಿಕಾರದ ಕಡೆಯಿಂದಾದ ವಿಳಂಬವೂ ಸಹ ವರ್ಣಿಸಲಸದಳ. ಆದುದರಿಂದ ಈ ನ್ಯಾಯಾಲಯವು, ವಿಚಾರಣೆಯನ್ನು ಮತ್ತೆ ತೆರೆಯುವುದು ಸಮರ್ಥಿತವಲ್ಲವೆಂದು ತನ್ನ ಸ್ವಾಭಾವಿಕ ನಿರ್ಣಯಕ್ಕೆ ಬಂದಿರುತ್ತದೆ. ಮೇಲೆ ತಿಳಿಸಲಾದ ಕಾರಣಗಳಿಗಾಗಿ ಈ ರಿಟ್ ಅರ್ಜಿಯನ್ನು ಈ ಮೂಲಕ ಪುರಸ್ಕರಿಸಿದೆ. ದಿನಾಂಕ 14.1.2016ರ ಪ್ರಶ್ನಿತ ಆದೇಶವನ್ನು ತಳ್ಳಿಹಾಕಲಾಗಿದೆ. ವೆಚ್ಚಗಳ ಸಂಬಂಧದಲ್ಲಿ ಯಾವುದೇ ಆದೇಶ ಇರುವುದಿಲ್ಲ.